ಮುಖವೇ ಮುಚ್ಚಿಹೋಗುವಷ್ಟು. ಇಂತಿಪ್ಪ ಬೆಕ್ಕುಗಳು ರಾತ್ರಿ ನಮ್ಮ ಹಾಸಿಗೆಯಲ್ಲೇ ನಮ್ಮ ಕಾಲಬುಡದಲ್ಲೇ ಮಲಗಿ ತಮ್ಮ ಮೋಟಾರು ಗೊರಕೆಯೊಂದಿಗೆ ನಮ್ಮನ್ನು ಪ್ರತಿದಿನ ನಿದ್ರೆಗೆ ತಳ್ಳುತ್ತಿದ್ದರೂ, ಹಾವನ್ನೋ ಹಲ್ಲಿಯನ್ನೋ ಹಿಡಿದು ತಂದ ದಿನದಿಂದ ಮತ್ತೆ ಒಂದು ವಾರದವರೆಗೆ ಅವುಗಳಿಗೆ ನಮ್ಮ ಹಾಸಿಗೆಗೆ ಎಂಟ್ರಿ ಇರುತ್ತಿರಲಿಲ್ಲ.

ಬೆಕ್ಕು ಯಾವತ್ತಾದರೂ ನೀವು ಕೇಳಿದ ಪ್ರಶ್ನೆಗೆ ಉತ್ತರಿಸಿದೆಯೇ? ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಿದರೆ, ‘ಉತ್ತರಿಸಿದೆ...’ ಎಂದು ಜೋರಾಗಿ ಹೇಳಿ ನಂತರ, ದಿನಕರ ದೇಸಾಯಿ ಅವರ ‘ಬೆಕ್ಕೇ ಬೆಕ್ಕೇ’ ಎಂಬ ಮಕ್ಕಳ ಪದ್ಯದಲ್ಲಿ ಮಾತ್ರ ಎಂದು ಮೆತ್ತಗೆ ಹೇಳಬಹುದು. ನಿಜಕ್ಕಾದರೂ ಅದು ನಮ್ಮ ಪ್ರಶ್ನೆಗೆ ಉತ್ತರಿಸುವುದು ಆ ಪದ್ಯದಲ್ಲಿ ಮಾತ್ರ. ಉಳಿದಂತೆ ನೀವು ಯಾವ ಪ್ರಶ್ನೆ ಎತ್ತಿದರೂ ಅದು ತಲೆ ಎತ್ತಿ ನಿಮ್ಮನ್ನು ನೋಡುವುದೂ ಇಲ್ಲ. ‘ಬೆಕ್ಕೇ ಬೆಕ್ಕೇ, ಬೇಗನೆ ಹೇಳೆ, ನೋಡಿದ ಆನಂದ...’ ಎಂದು ರಾಜನ ಸಂಗಡ ರಾಣಿಯೂ ಇದ್ದ ಅಂತಃಪುರದ ವಿಷಯ ತಿಳಿಯಲು ಅವಸರಿಸಿದರೆ, ಅದು ಯಾವ ಅವಸರವೂ ಇಲ್ಲದೆ ಹೇಳುವುದು ತನಗೆ ಸಂಬಂಧಪಟ್ಟ ಇಲಿಯ ವಿಷಯವನ್ನು ಮಾತ್ರ. ಆದರೆ ಇಲ್ಲಿ ಹಾಲು ಬೆಲ್ಲದ ಅದೃಷ್ಟವಿರುವುದು ಕನ್ನಡದ ಬೆಕ್ಕಿಗೆ ಮಾತ್ರ, ಪರಂಗಿ ಬೆಕ್ಕಪ್ಪನಿಗೆ ಈ ವ್ಯವಸ್ಥೆಯಿಲ್ಲ. ಕೆಲವೊಮ್ಮೆ ನಾನು ಮನೆಗೆ ಬಂದು ಬೀಗ ತೆಗೆದು ಒಳ ಹೊಕ್ಕಾಗ ಕುರ್ಚಿಯಲ್ಲಿ ಹೆಣದಂತೆ ಬಿದ್ದುಕೊಂಡಿರುವ ನಮ್ಮ ಸಂಗನೆಂಬ ಗಡವನನ್ನು (ತೌಡು ಬಣ್ಣದ ಇಂಡಿಯನ್ ಶಾರ್ಟ್ ಹೇರ್ ವೆರೈಟಿ) ನೋಡಿ, ‘ಏ ಸಂಗು ನಿನ್ನ ಹಾಗೆ ಇರುವುದನ್ನು ಕಲಿಸಿಕೊಡು ನಂಗೂ...’ ಎಂದು ದೈನ್ಯದಿಂದ ಹಾಡುತ್ತೇನೆ. ಎಷ್ಟು ಸಲ ಹಾಡಿದರೂ ಒಂದೇ... ಕೋಣನ ಮುಂದೆ ಕಿನ್ನರಿ. ಹಾ... ಕಿನ್ನರಿ ಅಂದಾಗ ನೆನಪಾಯಿತು... ಬೊಮ್ಮನಹಳ್ಳಿ. ಈ ಬೆಕ್ಕುಗಳ ಸಹವಾಸ ಬೇಡವೇ ಬೇಡ, ಇವು ಬರೀ ಸ್ವಾರ್ಥ ಮುಂಡೇವು ಅಂತ ಬಯ್ದುಕೊಂಡು ಊರಿನ ಗೌಡ ಇಲಿ ಹಿಡಿಯುವ ಕಾಂಟ್ರಾಕ್ಟ್ ಅನ್ನು ಜೋಗಿಗೆ ಕೊಡುತ್ತಾನೆ. ಹಾಗೆಯೇ ಈ ಬೆಕ್ಕುಗಳಿಗೆ ಘಂಟೆ ಕಟ್ಟುವ ಯೋಜನೆಯನ್ನೂ ಇಲಿಗಳು ಗುತ್ತಿಗೆದಾರನಾದ ಈ ಜೋಗಿಗೇ ಕೊಟ್ಟಿದ್ದರೆ ಇಲಿಗಳ ಸಂತತಿ ಮತ್ತೆ ಚಿಗುರಿಕೊಳ್ಳಲು ಅನುಕೂಲವಾಗುತ್ತಿತ್ತು... ಕೊಂದ ಪಾಪ ತಿಂದು ಪರಿಹಾರ ಎಂಬ ಗಾದೆಯಂತೆ ಜೋಗಿಯ ಪುಣ್ಯವೂ ವೃದ್ಧಿಸುತ್ತಿತ್ತು. ಫೇಸ್ ಈಸ್ ದ ಇಂಡೆಕ್ಸ್ ಆಫ್ ಮೈಂಡ್ ಎಂಬ ಇನ್ನೊಂದು ಗಾದೆ ಈ ಬೆಕ್ಕುಗಳಿಗೆ ಎಂದೆಂದೂ ಅನ್ವಯವಾಗದೆ ಇರುವುದರಿಂದ ಅವುಗಳಿಗೆ ಘಂಟೆ ಕಟ್ಟುವ ಇಲಿಗಳ ಯೋಜನೆ ಮತ್ತು ಯೋಚನೆ ಎರಡೂ ಪೆಂಡಿಂಗ್ ಆಗಿ ಉಳಿದುಬಿಟ್ಟಿವೆ. ಮಠದೊಳಗಿನ ಬೆಕ್ಕಿನ ಕಲ್ಪನೆ ಜೇಡರ ದಾಸಿಮಯ್ಯನಿಗೆ ಬಂದದ್ದು ಇದೇ ಕಾರಣಕ್ಕೇ ಅಲ್ಲವೇ?

ಇರಲಿ, ಈಗ ಪುನಃ ನಮ್ಮ ಸಂಗನ ವಿಷಯಕ್ಕೇ ಬರೋಣ... ಇವನೇನು ನಾವು ಸಾಕಿದ ಬೆಕ್ಕಪ್ಪನಲ್ಲ. ಒಂದು ಫೈನ್ ಡೇ ಎಲ್ಲಿಂದಲೋ ಬಂದು ಸೇರಿಕೊಂಡು ನಮ್ಮನೆ ಸದಸ್ಯನಾಗಿ ಕ್ರಮೇಣ ಯಜಮಾನನೂ ಆದವನು. ಬರುವಾಗ ಯಾರ ಜೊತೆಯೋ ಕಾದಾಡಿ, ಪೆಟ್ಟು ಮಾಡಿಕೊಂಡು ಮೈ ಕೈಯೆಲ್ಲ ತರಚಿಸಿಕೊಂಡು ದಯನೀಯ ಸ್ಥಿತಿಯಲ್ಲಿ ಬಂದಿದ್ದ. ತಂಗಳನ್ನ ಹಾಕಿದರೂ ಗಬಗಬನೆ ಮುಕ್ಕುತ್ತಿದ್ದ. ‘ಅವನ ಮೆಮೊರಿ ಕಾರ್ಡ್ ಡ್ಯಾಮೇಜಾಗಿ ಹೋಗಿದೆ... ಹಾಗಾಗಿ ಅವನಿಗೆ ಈಗ ಯಾವ ರುಚಿಯೂ ನೆನಪಿಲ್ಲ...’ ಅಂತ ನನ್ನ ಮಗ ತಮಾಷೆ ಮಾಡುತ್ತಿದ್ದ. ಗಾಯವೆಲ್ಲ ವಾಸಿಯಾಗುವುದರ ಜೊತೆಗೆ ಮೆಮೊರಿ ಕಾರ್ಡ್ ಕೂಡ ರಿಫ್ರೆಶ್ ಆಗಿ ತಿನ್ನುವುದರಲ್ಲಿ ಚೂಸಿ ಆಗತೊಡಗಿದ್ದ. ನಂತರ ನಮ್ಮ ಏರಿಯಾದ ಸಣ್ಣ ಮಟ್ಟಿನ ಸ್ಟ್ರೀಟ್ ರೌಡಿಯ ಪಟ್ಟಕ್ಕಾಗಿ ಸಾಕಷ್ಟು ಹೋರಾಡಿ, ಈ ಟೆರಿಟರಿ ಹೋರಾಟದಲ್ಲಿ ಯಶಸ್ವಿಯೂ ಆಗಿ ಈಗ (ಕುತ್ತಿಗೆಗೆ ಸ್ಕಾರ್ಫ್ ಇಲ್ಲದಿದ್ದರೂ) ಒಂದು ಮಟ್ಟಿಗೆ ಡಾನೋ, ಶೆಹೆನ್‌ಶಾನೋ, ಬಾದ್‌ಶಾನೋ ಏನೋ ಒಂದು ಆಗಿ ಅಹಂನಿಂದ ತಲೆಯೆತ್ತಿ ಓಡಾಡುತ್ತಿದ್ದಾನೆ. ಟಾಮ್ ಅಂಡ್ ಜೆರಿಯ ಟಾಮ್